# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ.1572-2019** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಯು.ಎನ್.ರಾಘವೇಂದ್ರರಾವ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 05-04-2023. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಬಿ.ಪಿ ವಕೀಲರಿಂದಃ**

5. ದೇಬೂರು ಗ್ರಾಮದ ನನಗೆ ಸೇರಿದ ಸರ್ವೆ ನಂ.288, 289 ಮತ್ತು 274 ಮತ್ತು ಬ್ಯಾಳಾರು ಗ್ರಾಮದ ಸರ್ವೆ ನಂ.62,64 ಮತ್ತು 60 ರ ಒಟ್ಟ ವಿಸ್ತೀರ್ಣ 12 ಎಕರೆ ಜಮೀನನ್ನು ನಾನು ಬಾಯಿ ಮಾತಿನ ಮುಖೇನ ಆರೋಪಿಗೆ ವ್ಯವಸಾಯ ಮಾಡಲು ನೀಡಿದ್ದೆನು ಎಂದರೆ ಸರಿಯಲ್ಲ. ನಾನು 2017 ರಲ್ಲಿ ನನಗೆ ಸೇರಿದ ಜಮೀನುಗಳನ್ನು ಆರೋಪಿಗೆ ಭತ್ತ ಬೆಳೆಯಲು ಗುತ್ತಿಗೆಗೆ ನೀಡಿದ್ದ ಸದರಿ ಗುತ್ತಿಗೆಯ ಭದ್ರತೆಗಾಗಿ ನಾನು ಆರೋಪಿಯಿಂದ ಚೆಕ್ ಮತ್ತು ಪ್ರನೋಟ್‌ಗಳನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. 2018 ರಲ್ಲಿ ಆರೋಪಿ ನನಗೆ ಗುತ್ತಿಗೆಯ ಹಣ ನೀಡಿಲ್ಲ ಎಂದು ನಾನು ಆರೋಪಿ ವಿರುದ್ದ ದೂರು ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2018 ರಲ್ಲಿ ನಾನು ನನ್ನ ಮಗನೋಂದಿಗೆ ಬೆಂಗಳೂರಿನಲ್ಲಿ ಇದ್ದು ಆ ಸಮಯ ನನ್ನ ಭತ್ತದ ಗದ್ದಗೆ ನೀರು ತುಂಬಿಕೊಂಡಿದ್ದು ಭತ್ತ ಕೂಯ್ಲಿ ಮಾಡಿಕೊಳ್ಳಲು ಮಹದೇವಸ್ವಾಮಿ ರವರಿಗೆ ಜಮೀನನ್ನು ತೋರಿಸುವಂತೆ ಆರೋಪಿಗೆ ತಿಳಿಸಿದ್ದು ಆ ಸಮಯ ಆರೋಪಿ ಮಹದೇವಸ್ವಾಮಿ ರವರಿಂದ ಭತ್ತದ ಹಣವನ್ನು ಪಡೆದುಕೊಂಡಿದ್ದರಿಂದ ನಾನು ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದೂರು ನೀಡಿದ ಸಮಯ ಪೊಲೀಸರು ನನಗೆ ಸ್ವೀಕೃತಿ ನೀಡಿದ್ದರೇ ಇಲ್ಲವೇ ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಆರೋಪಿ ಮಾರಾಟ ಮಾಡಿದ ಭತ್ತದ ಹಣವನ್ನು ಮಾದಪ್ಪನವರು ಯೂನಿಯನ್ ಬ್ಯಾಂಕ್‌ನ ತನ್ನ ಖಾತೆ ಮುಖೇನ ನನ್ನ ಖಾತೆಗೆ ಹಣ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಹಣವು ದಿ.02-08-2018 ರಂದು ನನ್ನ ಖಾತೆಗೆ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಖಾತಾ ಎಕ್ಸ್ ಟ್ರ್ಯಾಕ್ಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

6. ದೇಬೂರು ಗ್ರಾಮದಲ್ಲಿ ನಾನು ನನ್ನ ಸಹೋದರ ಪದ್ಮನಾಭರಾವ್ ರವರ ಅಕ್ರಮವಾಗಿ 27 ಎಕರೆ ಜಮೀನನ್ನು ಸಾಗುಳಿ ಮಾಡುತ್ತಿರುವ ಬಗ್ಗೆ ಗಲಾಟೆ ಆಗಿತ್ತು ಎಂದರೆ ಸರಿ. ಈ ಸಂಬಂಧ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಸಹ ಹೊರಡಿಸಲಾಗಿತ್ತು ಎಂದರೆ ಸಾಕ್ಷಿ ನನಗೂ ಅದಕ್ಕೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.277 ರ ಬಾಬ್ತು ಆರೋಪಿ ವಿರುದ್ದ 1 ನೇ ಹೆಚ್ಚುವರಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್.498/2019 ರಂತೆ ದಾವೆ ಹೂಡಿದ್ದು

ಸದರಿ ದಾವೆಯೂ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.277 ಅನ್ನು ನಾನು ಮತ್ತು ನನ್ನ ಸಹೋದರ ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದ ಬಗ್ಗೆ ಆರೋಪಿ ಮತ್ತು ದೇಬೂರಿನ ಗ್ರಾಮಸ್ಥರು ಪ್ರತಿಭಟನೆ ಮಾಡಿ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿದ್ದರಿಂದ ನಾನು ನನ್ನ ಸಹೋದರ ಚಿತಾವಣಿ ಮೇರೆಗೆ ನನಗೆ ಭತ್ತದ ಹಣ ಸಂದಾಯವಾಗಿದ್ದರೂ ಸಹ ಹಣ ಸಂದಾಯವಾಗಿಲ್ಲ ಎಂದು ಆರೋಪಿ ವಿರುದ್ಧ ಈ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿನ ಬರವಣಿಗೆ ಆರೋಪಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಚೆಕ್ ಅನ್ನು ಆರೋಪಿಯೇ ಬರೆದು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ದೇಬೂರಿನ ಗ್ರಾಮಸ್ಥರು ಪ್ರತಿಭಟನೆ ಮಾಡಿದ್ದರಿಂದ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಹಾಗೂ ಆರೋಪಿಯನ್ನು ಹತ್ತಿಕ್ಕಲು ನನಗೆ ಹಣ ಸಂದಾಯವಾಗಿದ್ದರೂ ಸಹ ನಿಪಿ-1 ಅನ್ನು ನಾನೇ ಭರ್ತಿಮಾಡಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2018 ರ ನಂತರ ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗದೇ ಇದ್ದರೂ ಸಹ ಆರೋಪಿ ನೀಡಿದ ಖಾಲಿ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು 2019 ರಲ್ಲಿ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2019 ರಲ್ಲಿ ನಾನು ಆರೋಪಿಗೆ ಮನೆ ಕಟ್ಟುವ ಉದ್ದೇಶಕ್ಕಾಗಿ ಸಾಲವಾಗಿ ಹಣ ನೀಡದೇ ಇದ್ದರೂ ಹಣ ನೀಡಿರುತ್ತೇನೆ ಎಂದು ಈ ಪಿರ್ಯಾದನ್ನು ಆರೋಪಿ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದರೂ ಆರೋಪಿಯು ದೇಬೂರು ಗ್ರಾಮದಲ್ಲಿ ನಡೆದ ಪ್ರತಿಭಟನೆಯ ಮುಂದಾಳತ್ವ ವಹಿಸಿದ್ದರಿಂದ ಆರೋಪಿಯನ್ನು ಹತ್ತಿಕ್ಕಲು ಆರೋಪಿ ವಿರುದ್ಧ ಈ ಸುಳ್ಳು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಭತ್ತದ ಕಟಾವು ಹಣವು ನನಗೆ ಮಾದಪ್ಪನ ಮುಖೇನ ಈಗಾಗಲೇ ಸಂದಾಯವಾಗಿರುವುದರಿಂದ ನಾನು ಪಿರ್ಯಾದಿನಲ್ಲಿ ಕೋರಿರುವಂತೆ ಆರೋಪಿ ನನಗೆ ಯಾವುದೇ ಹಣವನ್ನು ನೀಡಲು ಭಾದ್ಯಸ್ಥನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**